ಬೆಂಗಳೂರು ಪಶ್ಚಿಮ ವಲಯದ ಪಡಿತರ ಅಂಗಡಿಗಳಿಗೆ ವಲಯಾಧಿಕಾರಿಗಳು ಭೇಟಿ ನೀಡುವ ಬಗ್ಗೆ

೨೨೭. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ಪಶ್ಚಿಮ ವಲಯದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವಲಯಾಧಿಕಾರಿಗಳು ತಮ್ಮ ವಲಯದ ವ್ಯಾಪ್ತಿಗೆ ಬರುವ ಎಷ್ಟು ಅಂಗಡಿಗಳಿಗೆ ಜನವರಿಯಿಂದ ಇಲ್ಲಿಯವರೆಗೆ ಭೇಟಿ ನೀಡಿದ್ದಾರೆ (ತಿಂಗಳುವಾರು ವಿವರ ನೀಡುವುದು).

ಆ) ಇವರ ಭೇಟಿ ಸಮಯದಲ್ಲಿ ಪಡಿತರ ಅಂಗಡಿಗಳಲ್ಲಿನ ನ್ಯೂನತೆಗಳ ಬಗ್ಗೆ ಸರ್ಕಾರಕ್ಕೆ ಏನಾದರೂ ವರದಿ ಸಲ್ಲಿಸಿದ್ದಾರೆಯೇ ?

ಇ) ಇವರ ಭೇಟಿಯ ಸಮಯದಲ್ಲಿ ಕಾನೂನು ಉಲ್ಲಂಘನೆ ಮಾಡಿರುವಂತಹ ಎಷ್ಟು ಪಡಿತರ ಅಂಗಡಿಗಳ ಪರವಾನಿಗೆಗಳನ್ನು ರದ್ದು ಪಡಿಸಿದ್ದಾರೆ (ಇವುಗಳಲ್ಲಿ ನ್ಯಾಯ ಬೆಲೆ ಅಂಗಡಿಗಳು ನಿಗಮದ ಯೂನಿಟ್‌ಗಳು ಹಾಗೂ ಸಹಕಾರ ಸಂಘಗಳ ಬಗ್ಗೆ ಪ್ರತ್ಯೇಕ ಮಾಹಿತಿ ನೀಡುವುದು),

ಈ) ಇದರ ಭೇಟಿ ಸಮಯದಲ್ಲಿ ಪಡಿತರ ಚೀಟಿದಾರರುಗಳನ್ನು ಖುದ್ದಾಗಿ ಭೇಟಿ ಮಾಡಿ ಅವರುಗಳ ಕುಂದುಕೊರತೆಗಳನ್ನು ವಿಚಾರಿಸಿದ್ದಾರೆಯೇ ? (ಈ ಬಗ್ಗೆ ವಿವರಗಳನ್ನು ಒದಗಿಸುವುದು).

ಶ್ರೀ ಟಿ. ಎನ್. ನರಸಿಂಹಮೂರ್ತಿ, (ಆಹಾರ ಮಂತ್ರಿ ಮತ್ತು ನಾಗರೀಕ ಸರಬರಾಜು ಸಚಿವರು),—

ಅ) ಜನವರಿ ೯೦ ರಿಂದ ಇಲ್ಲಿಯವರೆವಿಗೆ ೭೦೭ ಭಾರಿ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿರುತ್ತಾರೆ.

ಜನವರಿ	೯೦	೫೮
ಫೆಬ್ರುವರಿ	೯೦	೭೪
ಮಾರ್ಚ್	೯೦	೭೧
ಏಪ್ರಿಲ್	೯೦	೭೭
ಮೇ	೯೦	೭೭
ಜೂನ್	೯೦	೯೩
ಜುಲೈ	೯೦	೭೫
ಆಗಸ್ಟ್	೯೦	೪೨
ಸೆಪ್ಟೆಂಬರ್	೯೦	೭೨
ಅಕ್ಟೋಬರ್	೯೦	೬೮
	ಒಟ್ಟು	೭೦೭

ಆ) ಇಂತಹ ಪ್ರಕರಣಗಳನ್ನು ಅಧಿಕೃತ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ.

ಇ) ಇಲ್ಲ

ಈ) ಈ ಕೆಳಕಂಡ ನ್ಯಾಯಬೆಲೆ ಅಂಗಡಿಗಳ ಬಳಿ ಕಾರ್ಡುದಾರರ ಕುಂದುಕೊರತೆಗಳನ್ನು ವಿಚಾರಿಸಲಾಗಿದೆ.—

೧)	ವಿಜಯ ಸ್ಟೋರ್ಸ್	ರಾಜಾಜಿನಗರ
೨)	ಶಿವಾನಂದ ಸ್ಟೋರ್ಸ್	ಗಾಯಿತ್ರಿನಗರ
೩)	ಸೋಮೇಶ್ವರ	ರಾಜಾಜಿನಗರ
೪)	ಮಂಜುನಾಥ ಸ್ಟೋರ್ಸ್	ರಾಜಾಜಿನಗರ
೫)	ವಾಸವಿಸ್ಟೋರ್	ರಾಜಾಜಿನಗರ

೬)	ಸೂರ್ಯನಾರಾಯಣ	ರಾಜಾಜಿನಗರ
೭)	ಪೀಪಲ್ಸ್ ಸಿ ಸಿ: ಎನ್.	ಇಂಡಸ್ಟ್ರಿಯಲ್‌ಟೌನ್
೮)	ಬಾಬು ಪ್ರಾವಿಜನ್	ಪ್ರಕಾಶನಗರ
೯)	ಎಸ್.ಎಲ್.ಎನ್. ಸ್ಟೋರ್	ಶ್ರೀರಾಂಪುರ
೧೦)	ಕೆ.ಎಫ್.ಸಿ.ಎನ್.ಸಿ. ಚಿಲ್ಲರೆ ಮಳಿಗೆ	ರಾಮೋಹನಪುರ

ಸರ್ಕಾರಿ ವೈದ್ಯರು ಸ್ವಂತ ಕ್ಲಿನಿಕ್‌ಗಳನ್ನು ನಡೆಸುತ್ತಿರುವ ಬಗ್ಗೆ

೨೬೭. ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುತ್ತಿರುವುದು ಮತ್ತು ಸ್ವಂತ ಕ್ಲಿನಿಕ್‌ಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ ಇವರುಗಳು ಹಣಗಳಿಕೆಯ ದೃಷ್ಟಿಯಿಂದ ತಮ್ಮ ನಿಜವಾದ ಕರ್ತವ್ಯವನ್ನು ಮರೆತಿರುವುದರಿಂದ ಸರ್ಕಾರ ಹಾಕಿಕೊಂಡಿರುವ (೨೦೦೦ ಇಸವಿಯ ವೇಳೆಗೆ ಎಲ್ಲರಿಗೂ ಆರೋಗ್ಯ) ಆರೋಗ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಯುತ್ತಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು).—

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಬೆಂಗಳೂರಿನ ಪಶ್ಚಿಮ ವಲಯದಲ್ಲಿ ಪಡಿತರ ಚೀಟಿಯನ್ನು ವಿತರಣೆ ಮಾಡಿದ ಬಗ್ಗೆ

೨೨೫. ಶ್ರೀ ಪಿ. ಸಿ. ಸಿದ್ದನಗೌಡರು (ಕಲಘಟಗಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ಪಶ್ಚಿಮ ವಲಯದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಜನವರಿ ೯೦ ರಿಂದ ಇಲ್ಲಿಯವರೆಗೆ ಎಷ್ಟು ಜನರಿಗೆ ಪಡಿತರ ಚೀಟಿಗಾಗಿ ಅರ್ಜಿಗಳನ್ನು ವಿತರಿಸಲಾಯಿತು?

ಆ) ಅವುಗಳಲ್ಲಿ ಭರ್ತಿ ಮಾಡಿ ಸಲ್ಲಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ?

ಇ) ಇವರಲ್ಲಿ ಎಷ್ಟು ಜನರಿಗೆ ಇದುವರೆವಿಗೂ ಪಡಿತರ ಚೀಟಿಯನ್ನು ವಿತರಿಸಲಾಗಿದೆ ಹಾಗೂ ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ, (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೭೦೨೪ ಅರ್ಜಿಗಳು

ಆ) ೬೭೫೮

ಇ) ೫೦೦೨ ಪಡಿತರ ಚೀಟಿಗಳನ್ನು ವಿತರಿಸಿದೆ. ೫೫೨ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಬೆಂಗಳೂರಿನಲ್ಲಿ ಖಾಸಗಿ ನರ್ಸಿಂಗ್ ಹೋಂಗಳ ಬಗ್ಗೆ

೨೩೩. ಶ್ರೀ ಎಂ. ನಾರಾಯಣ ಸ್ವಾಮಿ (ಚೇತಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿರುವ ಖಾಸಗೀ ನರ್ಸಿಂಗ್ ಹೋಂಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)